ಕರ್ನಾಟಕ ವಿಧಾನ ಸಭೆ

ಶುಕ್ರವಾರ 31ನೇ ಮಾರ್ಚ್ 2000ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಂ. ಪಿ. ಮಂಚಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಹಾಪ್‌ಕಾಮ್ಸ್ ಸಂಸ್ಥೆಯ ಕಾರ್ಯವ್ಯಾಪ್ತಿ

136 (1467) ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಪ್‌ಕಾಮ್ಸ್ ಸಂಸ್ಥೆಯ ಕಾರ್ಯಾ ವ್ಯಾಪ್ತಿ ಏನು?

ಆ) ರಾಜ್ಯದಲ್ಲಿ ಹಾಪ್‌ಕಾಮ್ಸ್ ಸಂಸ್ಥೆಯ ಎಷ್ಟು ಮಳಿಗೆಗಳಿವೆ (ಜಿಲ್ಲಾವಾರು ವಿವರ ನೀಡುವುದು)

ಇ) ರೈತರ ಉತ್ಪನ್ನಗಳನ್ನು ಕೊಳ್ಳಲು ಹಾಪ್‌ಕಾಮ್ಸ್ ಮಾದರಿಯ ಬೇರೆ ಯಾವುದಾದರೂ ಸಂಸ್ಥೆ ರಾಜ್ಯ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆಯೇ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು)

ಅ) ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳು.

ಆ) 404 ಮಳಿಗೆಗಳು

ಬೆಂಗಳೂರು ನಗರ	:	227
ಬೆಂಗಳೂರು (ಗ್ರಾ)	:	15
ಮೈಸೂರು	:	53
ಮಂಗಳೂರು	:	22
ಕೋಲಾರ	:	26
ಮಂಡ್ಯ	:	23
ಹಾಸನ	:	13
ತುಮಕೂರು	:	18 ಮತ್ತು
ಚಿಕ್ಕಮಗಳೂರು	:	7

ಇ)ನಿರ್ವಹಿಸುತ್ತಿದೆ. 15 ಜಿಲ್ಲಾ ಮಟ್ಟದ ತೋಟಗಾರಿಕೆ ಮಾರಾಟ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಶಿವಮೊಗ್ಗ, ತುಮಕೂರು ಚಿತ್ರದುರ್ಗ, ಮಂಗಳೂರು, ಕೊಡಗು, ಚಿಕ್ಕಮಗಳೂರು, ಮಂಡ್ಯ, ಶಿರಸಿ, ಬಿಜಾಪುರ, ಧಾರವಾಡ, ಬೆಳಗಾಂವ್, ರಾಯಚೂರು, ಬಳ್ಳಾರಿ, ಬೀದರ್ ಮತ್ತು ಗುಲ್ಬರ್ಗಾ.

ಶ್ರೀ ಎಂ.ಎಸ್. ಆತ್ಮಾನಂದ: ಸನ್ಮಾನ್ಯ ಅಧ್ಯಕ್ಷರೇ, ಹಾಪ್‌ಕಾಮ್ಸ್ ಸಂಸ್ಥೆಯ ಸುಮಾರು 404 ಮಳಿಗೆಗಳು 9 ಜಿಲ್ಲೆಗಳಲ್ಲಿ ಇವೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿರುತ್ತಾರೆ. ಆದರೆ ಕಾರ್ಯವ್ಯಾಪ್ತಿ ಮಾತ್ರ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾ ಜಿಲ್ಲೆಗಳಲ್ಲಿರತಕ್ಕಂಥ 268 ಮಳಿಗೆಗಳು ಹಾಗೂ ಈ ಮೂರು ಜಿಲ್ಲೆಗಳಿಗೆ ಹಾಪ್‌ಕಾಮ್ಸ್‌ನ ಕಾರ್ಯ ವ್ಯಾಪ್ತಿಯು ಸೀಮಿತವಾಗಿರತಕ್ಕಂಥಾದ್ದನ್ನು ತಿಳಿಸಿದ್ದಾರೆ. ಹಾಗಾದರೆ ಹಾಪ್‌ಕಾಮ್ಸ್‌ನಿಂದ ಸ್ಥಾಪಿಸಲ್ಪಟ್ಟಿರತಕ್ಕಂಥ ಆರು ಜಿಲ್ಲೆಗಳಲ್ಲಿರತಕ್ಕಂಥ 136 ಮಳಿಗೆಗಳ ಪರಿಸ್ಥಿತಿಯು ಏನು ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಅಂತೆಯೇ ಯಾವ ಕಾರಣಗಳಿಂದ ಈ ಮೂರು ಜಿಲ್ಲೆಗಳಿಗೆ ಮಾತ್ರ ಹಾಪ್‌ಕಾಮ್ಸ್‌ನ ಕಾರ್ಯ ವ್ಯಾಪ್ತಿಯನ್ನು ಸೀಮಿತಗೊಳಿಸಲಾಗಿದೆ ಎಂಬುದನ್ನು ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ಈ ಹಾಪ್‌ಕಾಮ್ಸ್ ಕೂಡ ಸಹಕಾರ ಇಲಾಖೆಯ ಅಡಿಯಲ್ಲಿ ಇದೆ. ಅವರು ಮೊನ್ನೆ ಜನರಲ್ ಬಾಡಿಯಲ್ಲಿ ರೆಸಲ್ಯೂಷನ್ ಮಾಡಿ, ಅಸಿಸ್ಟಂಟ್ ರಿಜಿಸ್ಟ್ರಾರ್ ಆಫ್‌ಕೋ-ಆಪರೇಟಿವ್ ಸೊಸೈಟಿಯವರು ಕಾರ್ಯವ್ಯಾಪ್ತಿಯನ್ನು ಈ ಮೂರು ಜಿಲ್ಲೆಗಳಿಗೆ ಸೀಮಿತಗೊಳಿಸಿದ್ದಾರೆ. ಮೊನ್ನೆಯತನಕ ಸುಮಾರು 404 ನಮ್ಮ ಮಳಿಗೆಗಳು 7-8 ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಾ ಇದ್ದವು. ಈಗ ತಮಗೆಲ್ಲರಿಗೂ ತಿಳಿದಂತೆ, ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಸೊಸೈಟೀಸ್ ಎಂದು ಆಗಿದ್ದಾವೆ. ಕರ್ನಾಟಕ ಹಾರ್ಟಿಕಲ್ಚರ್‌ಲ್ ಫೆಡರೇಶನ್ ಎಂದು ಸ್ಟೇಟ್ ಲೆವೆಲ್ ಫೆಡರೇಶನ್ ಆಗಿದೆ. ಈ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿರತಕ್ಕಂಥವುಗಳ ಅಸೆಟ್ಸ್ ಅಂಡ್ ಲಯಬಿಲಿಟೀಸ್‌ನ್ನು ಕೆಹೆಚ್‌ಎಫ್‌ಗೆ ಮಾಡಿ ಕೆಹೆಚ್‌ಎಫ್ ಮೂಲಕ ಇವುಗಳಿಗೆಲ್ಲಾ ಹೊಸ ಮತ್ತು ಹೆಚ್ಚಿನ ಚೈತನ್ಯವನ್ನು ಕೊಡಬೇಕೆಂದು ಸರಕಾರದವರು ಆಲೋಚನೆ ಮಾಡಿದ್ದಾರೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಕೆಹೆಚ್‌ಎಫ್ ಪ್ರಾರಂಭವಾಗಿ ಸುಮಾರು ಒಂದೂವರೆ ವರ್ಷ ಆಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅದು ಇನ್ನೂ ಕೂಡ ಪರಿಣಾಮಕಾರಿಯಾಗಿ ಕಾರ್ಯರಂಭವನ್ನು ಮಾಡಿಲ್ಲ ಹಾಪ್‌ಕಾಮ್ಸ್ ಯಾವೊತ್ತು ಕೂಡ ರೈತರು ತರತಕ್ಕಂಥ ತರಕಾರಿ ಹಾಗೂ ಅದಕ್ಕೋಸ್ಕರ ಮಾರುಕಟ್ಟೆಯನ್ನು ಒದಗಿಸಿಕೊಡುವುದಕ್ಕೋಸ್ಕರ ಇರತಕ್ಕಂಥಾದ್ದು. ಕೆಹೆಚ್‌ಎಫ್‌ಗೆ ಜಿಲ್ಲಾ ಹಾರ್ಟಿಕಲ್ಚರ್ ಸೊಸೈಟಿಯನ್ನು ಸೇರಿಸುವ ಹಂತದಲ್ಲಿದೆ ಎಂದು ಹೇಳುತ್ತಾರೆ. ಹಾಗಾದರೆ ಪ್ರಸಕ್ತ ಇರತಕ್ಕಂಥ 136 ಮಳಿಗೆಗಳ ಪರಿಸ್ಥಿತಿ ಹಾಗೂ ಅಲ್ಲಿಯ ರೈತರುಗಳ ಪರಿಸ್ಥಿತಿ ಏನು? ಇದು ರೈತರುಗಳ ಬದುಕಿನ ಮೇಲೆ ಪರಿಣಾಮ ಬೀರತಕ್ಕಂಥಾದ್ದು ಇರುವುದರಿಂದ ಇದರ ಬಗ್ಗೆ ಯಾವಾಗ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ? ಹಾಪ್‌ಕಾಮ್ಸ್ ರೈತರಿಗೋಸ್ಕರ ಇರತಕ್ಕಂಥ ಸಂಸ್ಥೆಯಾಗಿರುವುದರಿಂದ ಈ 136 ಮಳಿಗೆಗಳನ್ನು ಕೂಡ ಮುಂದುವರಿಸುವುದಕ್ಕೆ ಏನಾದರೂ ತೊಡಕು ಇದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ತೋಟಗಾರಿಕೆ ಇಲಾಖೆಯ ಕಾರ್ಯಕ್ರಮದ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕಾಯಿಪಲ್ಲೆ ಮತ್ತು ಹಣ್ಣು ಹಂಪಲುಗಳನ್ನು ಬೆಳೆಯ ತಕ್ಕಂಥ ಒಂದು ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ . ಅಂತಹ ಸಮಯದಲ್ಲಿ ಅಲ್ಲಿ ಬೆಳೆಯುವ ಹಣ್ಣುತರಕಾರಿ ಹೂವುಗಳು ಅಲ್ಲಿನ ಗ್ರಾಹಕರಿಗೇ ಸಿಗಬೇಕಾದ ಮಹತ್ವ ಇದೆ . ರೈತರು ಬೆಂಗಳೂರಿಗೆ ಕಳಿಸಲಾಗುವುದಿಲ್ಲ. ತಮ್ಮದೇ ಆದ ಹಾಪ್‌ಕಾಮ್ಸ್ ಇದ್ದರೆ ಅದರ ಮೂಲಕ ಮಾರಿದರೆ ಅವರಿಗೆ ಒಳ್ಳೆಯ ಬೆಲೆ ಸಿಗುತ್ತದೆ . ಗ್ರಾಹಕರಿಗೆ ಗುಣಮಟ್ಟದ ಹಾಗೂ ಸುಲಭದರಲ್ಲಿ ಕಾಯಿಪಲ್ಲೆ ಹಣ್ಣು ಸಿಗುವ ವ್ಯವಸ್ಥೆ ಸರ್ಕಾರ ಮಾಡುತ್ತದೆ . ಈಗಿರುವ ವ್ಯವಸ್ಥೆಯಲ್ಲಿ ಯಾವ ಬದಲಾವಣೆ ಮಾಡುವುದಿಲ್ಲ. ಆಡಳಿತ ಕಾರಣಕ್ಕಾಗಿ ಮೂರು ಜಿಲ್ಲೆ ಎಂದು ಮಾಡಿರುವುದು. ಈಗಿರುವ ಕಾರ್ಯಕ್ರಮವನ್ನೇ ಮುಂದುವರೆಸುತ್ತೇವೆ. ರೈತರಿಗೆ, ಗ್ರಾಹಕರಿಗೆ ಅನ್ಯಾಯವಾಗದ ರೀತಿ ಈ ಕಾರ್ಯಕ್ರಮ ಮುಂದುವರೆಸುತ್ತೇವೆ .

ಶ್ರೀ ಯು. ಆರ್. ಸಭಾಪತಿ : ಸಚಿವರು ಹಾಪ್‌ಕಾಮ್ಸ್ ಕೇವಲ ಮೂರು ಜಿಲ್ಲೆಗಿರಬೇಕೆಂದು ಸಹಕಾರ ಇಲಾಖೆ ನಿರ್ದೇಶನ ನೀಡಿದೆ ಎಂದು ಹೇಳಿದ್ದಾರೆ . ಉಳಿದ ಜಿಲ್ಲೆಗಳಿಗೆ ಏಕಾಗಿ ಆಗಲಿಲ್ಲವೆಂದು ಸ್ಪಷ್ಟೀಕರಿಸಿಲ್ಲ ,. ಉಳಿದ ಜಿಲ್ಲೆಯವರು ಏಕೆ ಆಫೆಸಿಲಿಟಿಯನ್ನು ಪಡೆದು ಕೊಳ್ಳಬಾರದೆಂದು ಸ್ಪಷ್ಟನೆ ನೀಡಬೇಕು. ಉಳಿದ ಜಿಲ್ಲೆಗಳಿಂದ ಅದರ ಬಗ್ಗೆ ಅರ್ಜಿಗಳು ಬಂದಿವೆಯೇ? ಈ ಬಗ್ಗೆ ಯಾವ ನಿರ್ಧಾರ ತೆಗೆದುಕೊಳ್ಳುತ್ತೀರಿ? ಸಹಕಾರ ಇಲಾಖೆ ತಮ್ಮ ಇಲಾಖೆಗೆ ಈ ತರಹದ ನಿರ್ದೇಶನ ಕೊಡಲು ಕಾರಣಗಳೇನು?

ಶ್ರೀ ಅಲ್ಲಂ ವೀರಭದ್ರಪ್ಪ : ಹಾಪ್‌ಕಾಮ್ಸ್ ತೋಟಗಾರಿಕೆಗೆ ಸಂಬಂಧಿಸಿದ್ದರೂ ಸೊಸೈಟಿಯಾಗಿರುವುದರಿಂದ ಸಹಕಾರ ಇಲಾಖೆಗೆ ಬರುತ್ತದೆ. ಅದಕ್ಕಾಗಿ ಅವರು ನಿರ್ಧಾರ ಮಾಡಿರುವುದು. ಜೊತೆಗೆ ಆಡಳಿತ ಕಾರಣದಿಂದ ಹಾಗೆ ಮಾಡಿದ್ದಾರೆ . ಯಾವ ರೀತಿಯಾದರೂ ಕೂಡ ಒಟ್ಟಾರೆ ಸರ್ಕಾರದ ನಿಲುವು ಏನೆಂದರೆ ಅಲ್ಲಿ ಬೆಳೆಯುವ ಹಣ್ಣು, ತರಕಾರಿ, ಹೂವುಗಳನ್ನು ರೈತನಿಗೆ ಅನ್ಯಾಯವಾಗದ ರೀತಿ ಹಾಪ್‌ಕಾಮ್ಸ್ ಮೂಲಕ ಮಾರಾಟ ಮಾಡುವ ವ್ಯವಸ್ಥೆ ನಾವು ಮಾಡಿಕೊಂಡು ಹೋಗುತ್ತೇವೆ .

ಶ್ರೀ ಎಸ್. ಎಸ್. ಪಾಟೀಲ್: ಅಧ್ಯಕ್ಷರೇ, ಕೆಎಚ್‌ಎಫ್‌ಗೆ ನಬಾರ್ಡ್ ಯೋಜನೆ ಮಂಜೂರಾಗಿತ್ತು ಅದು ಯಾವ ಹಂತದಲ್ಲಿದೆ ಎಂದು ಸಚಿವರು ಹೇಳಬೇಕು. ಆ ಯೋಜನೆ ಮಂಜೂರಾಯಿತೆ ಎಂದು ತಿಳಿಸಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ : ಇವತ್ತಿನವರೆಗೆ ಅಂತಹ ಯಾವ ಯೋಜನೆಯೂ, ಇಲ್ಲ, ಕೆಎಚ್‌ಎಫ್‌ಗೆ ಯಾವ ತರಹದ ಹಣವೂ ಬಂದಿಲ್ಲ . ಆದರೆ ಮೊನ್ನೆ ನಾವು ಅಹಮದಾಬಾದಿಗೆ ಹೋದಾಗ ನ್ಯಾಷನಲ್ ಡೇರಿ ಅಭಿವೃದ್ಧಿ ಮಂಡಲಿ ಎಂದು ಹೊಸದಾಗಿ ಸುಮಾರು 80 ಕೋಟಿ ರೂಪಾಯಿ ಗಳಲ್ಲಿ ಬೆಂಗಳೂರಿನಲ್ಲಿ ಹಣ್ಣು ಮತ್ತು ತರಕಾರಿಗಳಿಗೆ ಒಳ್ಳೆಯ ವ್ಯವಸ್ಥೆ ಮಾಡಬೇಕೆಂದು, ಈಗಾಗಲೇ ದೆಹಲಿ, ಬಾಂಬೆಗಳಲ್ಲಿ ಓಪನ್ ಮಾಡಿದ್ದಾರೆ . ಮೊಟ್ಟಮೊದಲಬಾರಿಗೆ ದಕ್ಷಿಣಭಾರತದಲ್ಲಿ ಬೆಂಗಳೂರಿನಲ್ಲಿ ಮಾಡಬೇಕು. ಇದರಿಂದ ರೈತರಿಗೆ ಶೀತಲಗೃಹ ಬಹಳಷ್ಟು ವ್ಯವಸ್ಥೆ ಮಾಡಬೇಕೆಂದು ಆಲೋಚನೆ ಮಾಡಿದ್ದಾರೆ .

ಶ್ರೀ ಎಸ್. ಎಸ್. ಪಾಟೀಲ್ : ಇದರಲ್ಲಿ ಬಹಳ ತೊಡರಿದೆ . ನಾನೂ ಹಿಂದೆ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಬಾರ್ಡ್ ಯೋಜನೆ ಬಗ್ಗೆ ಸಹಕಾರ ಸಚಿವರು ಹೇಳಬೇಕು. ಇಲ್ಲೇನಾಗಿದೆ ಅಂದರೆ ಬಹಳ ಮಂದಿಯನ್ನು ಮಂತ್ರಿ ಮಾಡಲು ಹೋಗಿ ಪರಿಸ್ಥಿತಿ ಹೀಗಾಗಿದೆ. ನಮ್ಮ ಸರ್ಕಾರದಲ್ಲೂ ಹಾಗೆ ಆಗಿತ್ತು.

ಕೆಎಚ್ಎಫ್‌ದು 78 ಕೋಟಿ ರೂಪಾಯಿಗಳ ಯೋಜನೆ ನಬಾರ್ಡ್‌ಗೆ ಕಳಿಸಿದ್ದೇವು. ಕೆಎಚ್ಎಫ್‌ಗೆ ಚುನಾಯಿತ ಪ್ರತಿನಿಧಿಗಳು ಬಂದಿದ್ದಾರೆ. ಆ ಯೋಜನೆ ಯಾವ ಹಂತದಲ್ಲಿದೆ ಎಂದು ತಿಳಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಇದು ತೋಟಗಾರಿಕೆಗೆ ಸಂಬಂಧಿಸಿದ್ದುದು. ತಾವೇನು ಪ್ರಸ್ತಾವನೆ ಕಳಿಸಿದ್ದಿರಿ ಅದನ್ನು ನಬಾರ್ಡ್ ಈಗಾಗಲೇ ಒಪ್ಪಿಕೊಂಡಿದೆ ಫೈನಾನ್ಸ್ ಮಾಡಲು ನಾವು ತಯಾರಿದ್ದೇವೆ ಎಂದು ಅದರ ಬೇರೆ ಕೆಲವು ಕಂಡೀಶನ್ಸ್, ಎಲ್ಲಿ ಹೇಗೆ ಮಾಡುತ್ತೀರಿ ಎಂದು ಡೀಟೈಲ್ಸ್ ಕೇಳಿದ್ದಾರೆ. ಅದನ್ನು ಅವರಿಗೆ ಒದಗಿಸಿದ್ದೇವೆ. ಅದೆಲ್ಲಾ ಆದ ಕೂಡಲೇ ತಾವೇನು ಯೋಜನೆ ಹಾಕಿದ್ದಿರಿ ಅದನ್ನು ನಾವು ಪೂರ್ಣಗೊಳಿಸುತ್ತೇವೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಅಧ್ಯಕ್ಷರೇ ಉತ್ತರದಲ್ಲಿ 15 ಜಿಲ್ಲಾಮಟ್ಟದ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ ಎಂದಿದ್ದಾರೆ. ಅದರಲ್ಲಿ ಬಿಜಾಪುರವನ್ನೂ ಸೇರಿಸಿದ್ದಾರೆ. ಬಿಜಾಪುರದಲ್ಲಿ ನಾನೂ ಒಬ್ಬ ತೋಟಗಾರಿಕೆ ಬೆಳೆ ಬೆಳೆಯುವ ರೈತನಾಗಿದ್ದು ಬಿಜಾಪುರದಲ್ಲಿ ಎಲ್ಲಿ ಹಾಪ್‌ಕಾಮ್ಸ್ ಮಳಿಗೆ ಕೆಲಸ ಮಾಡುತ್ತಿದೆ ಎಂದು ನನಗೂ ಗೊತ್ತಿಲ್ಲ. ಅದು ಕೆಲಸ ಮಾಡುತ್ತಿದೆಯೋ ಅಥವಾ ನಿಮಿತ್ತ ಮಾತ್ರಕ್ಕೆ ಆ ಹೆಸರಿದೆಯೋ ಎಂದು ಸಚಿವರಿಂದ ವಿತರಣೆ ಕೇಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಅಧ್ಯಕ್ಷರೇ, ಹಾಪ್‌ಕಾಮ್ಸ್‌ನ ಮೂಲ ಉದ್ದೇಶ ರೈತರಿಗೆ ಯೋಗ್ಯ ಮಾರುಕಟ್ಟೆ ಒದಗಿಸಿಕೊಡುವುದು, ಜಿಲ್ಲಾ ಮಟ್ಟದ ತೋಟಗಾರಿಕೆ ಮಾರುಕಟ್ಟೆ ರೈತರಿಗೆ ಸೀಮಿತ ಪ್ರಮಾಣದಲ್ಲಿರುತ್ತದೆ ಆದ್ದರಿಂದ ಹಾಪ್‌ಕಾಮ್ಸ್ ಮೂಲಕ ರೈತರಿಗೆ ವ್ಯವಸ್ಥೆ ಮಾಡಬೇಕು ಎಂಬ ಘನವಾದ ಉದ್ದೇಶದಿಂದ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಶನ್ ಪ್ರಾರಂಭವಾಗಿದೆ. ಅದಿನ್ನೂ ಶೈಶವಾವಸ್ಥೆಯಲ್ಲೇ ಇದೆ. ಹಾಲಿ ಹಾಪ್‌ಕಾಮ್ಸ್ ಶೇಕಡ 10 ರಷ್ಟು ರೈತರ ಉತ್ಪನ್ನ ಕೊಳ್ಳುವ ಶಕ್ತಿ ಪಡೆದಿದೆ. ಆದ್ದರಿಂದ ರೈತರಿಗೆ ವಿಸ್ತೃತ ಮಾರುಕಟ್ಟೆಯನ್ನು, ಯೋಗ್ಯ ಬೆಲೆಯನ್ನು ದೊರಕಿಸಿಕೊಡುವ ಕಾರ್ಯಕ್ರಮವನ್ನು ಮಂತ್ರಿಗಳು ರೂಪಿಸುತ್ತಾರೆಯೇ ಎಂದು ನಾನು ಕೇಳುತ್ತೇನೆ ಹಾಗೂ ಕಾಲಮಿತಿಯೊಳಗೆ ಅದನ್ನು ಮಾಡುತ್ತಾರೆಯೇ?

ಶ್ರೀ ಅಲ್ಲಂ ವೀರಭದ್ರಪ್ಪ : ಬಹಳ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಸೊಸೈಟಿ ಎಂದು ಇವೆ. ಮೊದಲಿನಿಂದ ನಡೆದುಬಂದಂತೆ ಇವು ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಆಫೀಸಿನಲ್ಲೇ ಇರುತ್ತವೆ. ಅಲ್ಲೇ ಒಂದು ಸಣ್ಣ ಶೆಡ್‌ನಲ್ಲಿ ಮಾಡುತ್ತವೆ. ಬೇರೆ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ನೇರವಾಗಿ ರೈತರಿಗೆ ಯಾವ ತರಹದ ಸಹಾಯವನ್ನೂ ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಹಾಪ್‌ಕಾಮ್ಸ್ ಮಾದರಿ ವ್ಯವಸ್ಥೆ ಮಾಡಬೇಕೆಂಬುದು ಸರ್ಕಾರದ ಉದ್ದೇಶ ಇದೆ. ಜಿಲ್ಲಾ ತೋಟಗಾರಿಕಾ ಸಂಘದ ಮೂಲಕ ಆದರೂ ಆಗಬಹುದು ಅಥವಾ ಅವರಾಗೇ ಮುಂದೆಬಂದು ಹಾಪ್‌ಕಾಮ್ಸ್ ಜೊತೆ ಮಾಡುತ್ತೇವೆ ಎಂದರೂ ನಾವು ಸಿದ್ಧರಿದ್ದೇವೆ. ಅಥವಾ ಕೆಎಚ್ಎಫ್ ಮೂಲಕ ಮಾಡಬೇಕೆಂದರೂ ಆದಕ್ಕೂ ಸಿದ್ದವಿದ್ದೇವೆ. ಎಲ್ಲಿ ಬೆಳೆಯುವ ರೈತರ ಜೊತೆ ಕುಳಿತು ಮಾತನಾಡಿ ಅವರಿಗೆ ಅನುಕೂಲಕರ ವ್ಯವಸ್ಥೆ ಮಾಡಲು ಸರ್ಕಾರ ಸಿದ್ಧವಿದೆ.

ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯ ಪುತ್ತೂರು ತಾಲ್ಲೂಕಿನಲ್ಲಿ ಹಲವಾರು ಹುದ್ದೆಗಳು ಖಾಲಿ ಇರುವ ಬಗ್ಗೆ

137 (1449) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?